
# ‘ಕೇದಾರನ ಕಾಶಿ’ : ಒಂದು ಟಿಪ್ಪಣಿ

ಜಗತ್ತಿನ ಪುರಾತನ ನಗರಿ ಎನಿಸಿರುವ ಕಾಶೀಕ್ಷೇತ್ರ, ಪುಣ್ಯಭೂಮಿಯು ಭಾರತದ ಆಧ್ಯಾತ್ಮಿಕ ರಾಜಧಾನಿ ಹಾಗೂ ಭಾರತೀಯ ಆಧ್ಯಾತ್ಮಿಕತೆಯ ಆತ್ಮರೂಪಿ ನೆಲೆಯಲ್ಲಿದೆ ಎಂದೇ ಪ್ರಸಿದ್ಧಿಯಾಗಿದೆ. ಸ್ವಾಮಿ ಶಿವಾತ್ಮಾನಂದ ಪುರಿ ಅವರ **‘ಕೇದಾರನ ಕಾಶಿ’** ಕೃತಿಯು ಕಾಶೀಕ್ಷೇತ್ರವನ್ನು ಕುರಿತ ವಿಭಿನ್ನವಾದ ಒಳನೋಟಗಳನ್ನು ನೀಡುತ್ತದೆ.

ಈ ಕೃತಿ ಕೇವಲ ಒಂದು ಪ್ರವಾಸ ಕಥನವಾಗಿರದೆ ಕಾಶೀಕ್ಷೇತ್ರವನ್ನು ಕುರಿತ ಅನಾದಿ ಕಾಲದ ಆಧ್ಯಾತ್ಮಿಕ ರಹಸ್ಯಗಳನ್ನು ಎಳೆ ಎಳೆಯಾಗಿ ಚರ್ಚಿಸುತ್ತದೆ. ಈ ಕೃತಿಯ ಉಪ ಶೀರ್ಷಿಕೆ ಸೂಚಿಸಿರುವಂತೆ ಇಲ್ಲಿ ಕಾಶಿಯ ಭೌಗೋಳಿಕ ವರ್ಣನೆಯಷ್ಟೇ ಇರದೆ ಕಾಶೀಕ್ಷೇತ್ರದ ಆಧ್ಯಾತ್ಮಿಕ ನೆಲೆಗಟ್ಟನ್ನು ಪೌರಾಣಿಕ ಹಿನ್ನೆಲೆಗಳ ಮೂಲಕ ಭಾರತೀಯ ಯೋಗಾಧ್ಯಾತ್ಮದ ಚಿಂತನ-ಮಂಥನ ನಡೆಸುತ್ತದೆ.

ಕಳೆದ ಶತಮಾನದ ಎಂಬತ್ತರ ದಶಕದಿಂದ ಆರಂಭವಾಗುವ ಈ ಕಾಶೀಯಾತ್ರೆಯು ಅನಂತರ ಹಲವು ಸಲ ನಡೆದಿದೆ. ಪ್ರತಿಸಲದ ಯಾತ್ರೆಯಲ್ಲಿ ತಮಗಾದ ಅನುಭವಗಳನ್ನು ಲೇಖಕರು ಇಲ್ಲಿ ದಾಖಲಿಸಿದ್ದಾರೆ. ಕಾಲಾಂತರದಲ್ಲಿ ನಡೆದಿರುವ ಬಾಹ್ಯಕಾಶಿಯಲ್ಲಿನ ಬದಲಾವಣೆಗಳ ವಿವರ ಇಲ್ಲಿದೆ. ಈ ಕೃತಿ ನಮಗೆ ಮುಖ್ಯವಾಗುವುದು ಈ ವಿವರಣೆಗಳಿಂದಲ್ಲ. ಕಾಶಿಯ ಪ್ರಭೆ ಅನಾದಿಕಾಲದಿಂದಲೂ ಬೆಳಗುತ್ತ ಬಂದಿದೆ; ಕಾಲನ ಹೊಡೆತಕ್ಕೆ ಪಕ್ಕಾಗದೆ ಯುಗ-ಯುಗಾಂತರಗಳಿಂದ ಉಳಿದುಬರುತ್ತಿರುವ ಕಾಶಿಕ್ಷೇತ್ರದ ಅಮರ ಆಧ್ಯಾತ್ಮಿಕ ಪ್ರಭೆಯ ಸೂಕ್ಷ್ಮತೆಯು ಈಗಲೂ ಅಚ್ಚಳಿಯದಂತಿದೆ ಎನ್ನುವ ವಿವರಣೆಗಳಿಂದಾಗಿ ಈ ಕೃತಿ ನಮಗೆ ಮುಖ್ಯವಾಗುತ್ತದೆ.




ಕೃತಿ : **ಕೇದಾರನ ಕಾಶಿ**
ಲೇಖಕರು : **ಸ್ವಾಮಿ ಶಿವಾತ್ಮಾನಂದ ಪುರಿ**
ಪ್ರಕಾಶಕರು : **ವಂಶಿ ಪ್ರಕಾಶನ, ನೆಲಮಂಗಲ, ಬೆಂಗಳೂರು - 562123**
ಪುಟಗಳು : **368** ಬೆಲೆ : **320 ರೂ.**

ಗುರುಪರಂಪರೆಯ ಸ್ತೋತ್ರದೊಂದಿಗೆ ಆರಂಭವಾಗುವ ಈ ಕೃತಿಯು ಭಾರತೀಯ ಗುರುಪರಂಪರೆಯ ದಶನಾಮಿ ಪಂಥದ ಪ್ರಾಚೀನತೆ; ವಾರುಣೆ-ಅಸಿ ಹಾಗೂ ಗಂಗಾ ನದಿಗಳ ಪ್ರಾಚೀನತೆ; ಕಾಶಿಯಲ್ಲಿರುವ ವಿಶ್ವನಾಥ, ಕಾಲಭೈರವನಾಥ, ಮಣಿಕರ್ಣಿಕೇಶ್ವರ, ಮಧ್ಯಮೇಶ್ವರ, ಆತ್ಮವೀರೇಶ್ವರ, ಸ್ವರ್ಲಿನೇಶ್ವರ, ವಿಶಾಲಾಕ್ಷಿ ಹಾಗೂ ಅನ್ನಪೂರ್ಣಾ ದೇವತೆಗಳ-ದೇವಾಲಯಗಳ ಪ್ರಾಚೀನತೆಯ ವರ್ಣನೆ; ಚಕ್ರತೀರ್ಥ ಲೋಲಾರ್ಕ ಕುಂಡಗಳು, ಹಲವಾರು ಘಾಟ್‌ಗಳು; ತ್ರೈಲಂಗ ಸ್ವಾಮಿಗಳ ಮಠ ಮೊದಲಾಗಿ ಕಾಶಿಯ ಹಲವಾರು ಆಶ್ರಮಗಳ ವಿವರಗಳನ್ನು ಒಳಗೊಂಡಿದೆ; ಕಾಶಿಯು ಮಾನವರಿಗಷ್ಟೇ ಅಲ್ಲದೆ ಋಷಿ-ಮುನಿಗಳು ಹಾಗೂ ದೇವತೆಗಳಿಗೂ ಹೇಗೆ ಪುಣ್ಯ ಕ್ಷೇತ್ರವಾಗಿದೆ ಎನ್ನುವುದು ಹಲವವಾರು ದೃಷ್ಟಾಂತಗಳ ಮೂಲಕ ವರ್ಣಿತವಾಗಿದೆ. ಸ್ವಾಮಿ ವಿವೇಕಾನಂದರ ಅವತಾರದ ಹಿಂದೆಯೂ ಕಾಶಿಯ ವೀರೇಶ್ವರ ಲಿಂಗದ ಸೂತ್ರವಿರುವುದು ಈ ಕ್ಷೇತ್ರದ ಗಮನಾರ್ಹ ಅಂಶಗಳಲ್ಲೊಂದು.

ಈ ಕೃತಿಯನ್ನು ಮೂರು ಭಾಗಗಳಾಗಿ ಗ್ರಹಿಸಬೇಕಿದೆ; ಮೊದಲ ಭಾಗದಲ್ಲಿ ಕಾಶೀಕ್ಷೇತ್ರದ ಆಧ್ಯಾತ್ಮಿಕ ಸೂಕ್ಷ್ಮತೆಯ ವರ್ಣನೆ ಇದೆ; ಕಾಶೀಕ್ಷೇತ್ರದಲ್ಲಿರುವ ಲಿಂಗಗಳು ವಿಶ್ವೇಶ್ವರನ ಯೋಗಶರೀರದ ಅವಯವಗಳಾಗಿವೆ ಎನ್ನುವ ಅಪರೂಪದ ವರ್ಣನೆ ಇಲ್ಲಿದೆ. ಎರಡನೆ ಭಾಗದಲ್ಲಿ ಈ ಸಾಧಕರ ಜೀವಿತದ ನಿಜ ಘಟನೆಗಳ ಆಧಾರದ ವರ್ಣನೆಗಳಿವೆ. ಮೂರನೆಯ ಭಾಗದಲ್ಲಿ ಚಿಂತನ-ಮಂಥನದ ಟಿಪ್ಪಣಿಗಳು ಹಾಗು ಅನುಬಂಧಗಳಿವೆ. ಇಲ್ಲಿನ ಚಿಂತನ-ಮಂಥನದಿಂದ ಪ್ರಕಟಗೊಂಡಿರುವ ಅಪರೂಪದ ಸಂಗತಿ ಎಂದರೆ ಇಡೀ ಭರತಭೂಮಿಯು ಒಂದು ವಿಶೇಷ ದೈವೀ ನೆಲೆಗಟ್ಟಿನಮೇಲೆ ನಿಂತಿದೆ ಎನ್ನುವ ವಿವರಣೆ ತುಂಬಾ ಗಮನಾರ್ಹದ್ದಾಗಿದೆ. ಉತ್ತರದ ಕಾಶಿಯಲ್ಲಿರುವುದು ಜ್ಯೋತಿರ್ಲಿಂಗ, ದಕ್ಷಿಣದ ತಮಿಳುನಾಡಿನ ಅರುಣಾಚಲದಲ್ಲಿರುವುದು ಅಗ್ನಿಲಿಂಗ ; ಈ ಎರಡೂ ಲಿಂಗಗಳ ನಡುವಿನ ಸಂಬಂಧ; ಉತ್ತರ ಹಾಗೂ ದಕ್ಷಿಣ ಭಾರತದ ನಡುವಿನಲ್ಲಿರುವ ಅವಿನಾಭಾವ ಆಧ್ಯಾತ್ಮಿಕ ಅನುಬಂಧದ ವರ್ಣನೆ ಕೂಡ ನಮ್ಮ ಗಮನಸೆಳೆಯುತ್ತದೆ.


ಒಟ್ಟಾರೆಯಾಗಿ ಈ ಕೃತಿ ಕಾಶೀಕ್ಷೇತ್ರದ ಸ್ಥಳಪುರಾಣ ಹಾಗೂ ಭೌಗೋಳಿಕ ವರ್ಣನೆಯನ್ನು ಆಧರಿಸಿದ ಕೃತಿಯಾಗದೆ ಅನಾದಿಯಿಂದ ಇಂದಿನ ಆಧುನಿಕ ಕಾಲದವರೆಗೂ ಕಾಶೀಕ್ಷೇತ್ರವು ಹೇಗೆ ಒಂದು ಜಾಗೃತ ಸ್ಥಳವಾಗಿದೆ ಎನ್ನುವುದನ್ನು ಸರಳವಾಗಿ ವರ್ಣಿಸಿದೆ. ಕಾಶೀಕ್ಷೇತ್ರ ಹಾಗೂ ಇಡೀ ಭರತಖಂಡದ ನಡುವಿನಲ್ಲಿ ಅವರ್ಣನೀಯ ಸಂಬಂಧವಿರುವುದು ಇಲ್ಲಿ ಮಿಂಚಿನಗೆರೆಯಂತೆ ಹೊಳೆಯುತ್ತದೆ. ಕಾಶಿ ಎನ್ನುವುದರ ಅರ್ಥ ಬೆಳಕು: ಭಾರತ ಎನ್ನುವುದರ ಅರ್ಥ ಹೊಳೆಯುವುದು ಅಥವಾ ಪ್ರಕಾಶಿಸುವುದು. ಬೆಳಕಿಲ್ಲದೆ ಯಾವುದಾದರೂ ಹೊಳೆಯುತ್ತ ಪ್ರಕಾಶಿಸುತ್ತದೆಯೆ? ಜಗತ್ತಿನಲ್ಲಿ ಭಾರತ ಹೊಳೆಯುತ್ತಿರುವುದು ತನ್ನ ಆಧ್ಯಾತ್ಮಿಕ ಪ್ರಕಾಶದ ಬೆಳಗಿನಿಂದ ಎನ್ನುವ ಪ್ರಾಚೀನ ಸತ್ಯವನ್ನು ಈ **‘ಕೇದಾರನ ಕಾಶಿ’** ಕೃತಿ ಓದುಗರ ಕಂಗಳ ಮುಂದೆ ಮಿಂಚಿಸುತ್ತದೆ.

**‘ಕೇದಾರನ ಕಾಶಿ’** ಕೃತಿಯನ್ನು ವಂಶಿ ಪಬ್ಲಿಕೇಷನ್ಸ್‌ವತಿಯಿಂದ ಶ್ರೀಯುತ ಪ್ರಕಾಶ್ ರವರು ಅಂದವಾಗಿ ಹೊರತಂದಿದ್ದಾರೆ. ಹಲವಾರು ಸಾಂದರ್ಭಿಕ ಚಿತ್ರಗಳನ್ನೊಳಗೊಂಡು ಅಂದವಾದ ಮುಖಪುಟ ವಿನ್ಯಾಸದೊಂದಿಗೆ ಪುಸ್ತಕ ಸುಂದರವಾಗಿ ಮೂಡಿಬಂದಿದೆ.

*— ಬಿ. ಜಿ. ಜಗದೀಶ ಸಾಗರ್*

# ಬಾಳಿಗೆ ದಾರಿ ತೋರಬಲ್ಲ ನೈತಿಕ ಕಥೆಗಳ ಸಂಕಲನ

ಅನಾದಿ ಕಾಲದಿಂದಲೂ ಜನರ ಮನಸ್ಸನ್ನು ಸೂರೆಗೊಂಡ ಮಾಧ್ಯಮವೇ ಸಣ್ಣ ಸಣ್ಣ ಕಥೆಗಳು. ವೇದಗಳಲ್ಲಿ, ಮಹಾಭಾರತ-ರಾಮಾಯಣಗಳಲ್ಲಿ, ಪುರಾಣಗಳಲ್ಲಿ ಹಾಗೂ ಪಂಚತಂತ್ರ, ಕಥಾಸಂಗ್ರಹವೇ ಮೊದಲಾದ ಸಾಹಿತ್ಯ ಕೃತಿಗಳಲ್ಲೂ, ವಿವಿಧ ಪ್ರಕಾರದ ಜಾನಪದ ಕಥೆಗಳಲ್ಲೂ ಅತಿ ಸಮೃದ್ಧವಾದ ಕಥನಪರಂಪರೆಯನ್ನು ಕಾಣುತ್ತೇವೆ. ಅನೇಕ ಸಂದರ್ಭಗಳಲ್ಲಿ ನೈತಿಕ ಮೌಲ್ಯವನ್ನು ತಿಳಿಯಪಡಿಸಲು ಕಥೆಗಳು ಅತ್ಯಂತ ಪರಿಣಾಮಕಾರಿಯಾದ ಮಾಧ್ಯಮವಾಗಿವೆ. ಇಂಥ ಹತ್ತು ಹಲವು ನೈತಿಕ ಕಥೆಗಳ ಒಂದು ಉತ್ತಮ ಸಂಕಲನವನ್ನು ಡಾ. ವಾಗೀಶ್ವರೀ ಶಿವರಾಮ ಅವರು ರಚಿಸಿದ್ದು, ಮಂಗಳೂರಿನ ವಾಗೀಶ್ವರೀ ಪ್ರಕಾಶನದಿಂದ ಇತ್ತೀಚೆಗೆ ಪ್ರಕಟವಾಗಿದೆ.




ಕೃತಿ : ೧೦೮ ಪಾಥೇಯ - ಕಥಾಮಾಲಾ
ಲೇಖಕರು : ವಾಗೀಶ್ವರೀ ಶಿವರಾಮ
ಪ್ರಕಾಶಕರು : ವಾಗೀಶ್ವರೀ ಪ್ರಕಾಶನ, ಕಾವೂರು, ಮಂಗಳೂರು - 575015
ಫೋ: 0824-2483242, 9986200736
ಪುಟಗಳು : 174 ಬೆಲೆ : 150 ರೂ.

ಈ ಗ್ರಂಥದ ಶೀರ್ಷಿಕೆ '**೧೦೮ ಪಾಥೇಯ-ಕಥಾಮಾಲಾ**'. ಹೆಸರೇ ಸೂಚಿಸುವಂತೆ, ಇಲ್ಲಿ 108 ಕಥೆಗಳಿವೆ. ಇದರಲ್ಲಿ ರಾಮಾಯಣ, ಮಹಾಭಾರತ, ಪುರಾಣಗಳಲ್ಲದೆ ಇನ್ನಿತರ ಅನೇಕ ಸಂತ-ಮಹಾತ್ಮರ, ಝೆನ್ ಮೊದಲಾದ ವಿದೇಶೀ ಪರಂಪರೆಯ ಕಥೆಗಳೂ ಇಲ್ಲಿವೆ. ಪ್ರತಿಯೊಂದು ಕಥೆಯ ನಂತರ ಆ ಕಥೆಯ ನೀತಿಯನ್ನು ವಿಶದಪಡಿಸುವ ಒಂದೊಂದು ಶ್ಲೋಕ, ಕಗ್ಗ, ಸುಭಾಷಿತ ಇತ್ಯಾದಿಗಳನ್ನು ಅರ್ಥದೊಂದಿಗೆ ನೀಡಿರುವುದು ತುಂಬ ಉಪಯುಕ್ತವಾಗಿದೆ. ಲೇಖಕರು ತಮ್ಮ 'ಅಂತರಂಗದ ನುಡಿ'ಯಲ್ಲಿ ಹೀಗೆ ಹೇಳುತ್ತಾರೆ: ''ದೀರ್ಘಕಾಲದ ಪ್ರಯಾಣದಲ್ಲಿನ ಬುತ್ತಿಯ ಗಂಟು(ಪಾಥೇಯ) ಹಸಿವನ್ನು, ದಣಿವನ್ನು ತಣಿಸಿ, ಚೈತನ್ಯವನ್ನು ತುಂಬಿ ಗಮ್ಯಸ್ಥಾನವನ್ನು ಸುರಕ್ಷಿತವಾಗಿ ತಲುಪಿಸಲು ಸಹಾಯಕ. ಹಾಗೆಯೇ ನಾವೆಲ್ಲ ಜೀವನಯಾತ್ರೆಯ ಪ್ರಯಾಣಿಕರು. ನರ, ನಾರಾಯಣನಾಗುವವರೆಗೂ ಪ್ರಯಾಣ ಮಾಡುತ್ತಲೇ ಇರಬೇಕಾಗುತ್ತದೆ. ಈ ಜೀವನ ಪ್ರಯಾಣ ಸುಗಮವಾಗಲು; ಆನಂದ, ನೆಮ್ಮದಿಗಳು ಗುರಿ ಮುಟ್ಟಲು ಈ ''**ಪಾಥೇಯ ಕಥಾಮಾಲಾ**'' ಒಂದು ಕೈದೀವಿಗೆ. ಈ ಬುತ್ತಿಯ ಗಂಟಿನಲ್ಲಿ ಪೌರಾಣಿಕ, ಕೌಟುಂಬಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದ 108 ಕಥೆಗಳ ಪಾಥೇಯವನ್ನು ಕಟ್ಟಿಕೊಡಲಾಗಿದೆ. ಇದರಲ್ಲಿನ 108 ಸಂದೇಶಗಳು, ಸುಭಾಷಿತ-ಗೀತೆ-ಕಗ್ಗಗಳಿಂದ ಆಯ್ದ ಉದ್ಧರಣೆಗಳು, ಧನಾತ್ಮಕ ಚಿಂತನೆಗಳು ನೊಂದು-ಬೆಂದ-ಜೀವಿಗಳಿಗೆ ಸಾಂತ್ವನ ನೀಡುವ ಚೋದನಿಗಳು. ಇಂದಿನ ತಾತ್ವಿಕ ಯುಗದಲ್ಲಿ, ಋಷಿಸಂಸ್ಕೃತಿಯ ಸಿಂಚನವನ್ನು ಬಯಸುವವರಿಗೆ, ಇಲ್ಲಿರುವ ಕಥಾಸಂದೇಶಗಳು ತಂಪನ್ನೆರೆಯುವ ವರ್ಷಾಧಾರೆಗಳು.'' ಈ ಕೃತಿಯ ಉದ್ದೇಶ, ವ್ಯಾಪ್ತಿ, ವಿಷಯ ಹಾಗೂ ಚೌಕಟ್ಟು ಇವನ್ನು ಮೇಲಿನ ವಾಕ್ಯಗಳು ಸ್ಫುಟವಾಗಿ ವಿವರಿಸುತ್ತವೆ.

ಮುನ್ನುಡಿ ಬರೆದಿರುವ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಹೇಳುವಂತೆ, ''ಕಥೆಯ ಆರಂಭದಲ್ಲಿರುವ ಸಂದೇಶ, ಕೊನೆಯಲ್ಲಿರುವ ಸುಭಾಷಿತ ಅಥವಾ ಕಗ್ಗ/ಗೀತೆಯ ಶ್ಲೋಕ ಇವುಗಳು ಜೀವನಯಾತ್ರೆಯಲ್ಲಿ ಮನಸ್ಸು, ಬುದ್ಧಿ, ಭಾವಗಳಿಗೆ ವಿಚಾರಗಳ ಶಕ್ತಿ ಯನ್ನು ತುಂಬಿ, ಆತ್ಮದ ಅರಳುವಿಕೆಯ ಮೂಲಕ ಬಾಳಯಾತ್ರೆ ಸುಗಮವೂ, ಮಂಗಳಮಯವೂ ಆನಂದಮಯವೂ ಆಗುವಂತೆ ಪ್ರೇರಣೆಯನ್ನು ನೀಡುತ್ತವೆ. ಅಷ್ಟೋತ್ತರ ಶತ(108)ನಾಮಾವಳಿಗಳಿಂದ ದೇವರನ್ನು ನಿತ್ಯವೂ ದೇವಾಲಯದಲ್ಲಿ ಪೂಜಿಸುವಂತೆ, ಈ ಕೃತಿಯನ್ನು ನಿತ್ಯವೂ ಓದಿ ಹೃನ್ಮಂದಿರದಲ್ಲಿರುವ ಗುಣರೂಪದ ಭಗವಂತನನ್ನು ಸ್ಮರಿಸಬೇಕು ಹಾಗೂ ಆರಾಧಿಸಬೇಕೆಂದು ಸೂಚಿಸಲು ಲೇಖಕರು 108 ಕಥೆಗಳನ್ನೇ ಆಯ್ಕೆಮಾಡಿದಂತಿದೆ.'' ಕೃತಿಯ ಸತ್ವಕ್ಕೆ ಈ ಮೇಲಿನ ನುಡಿಗಳು ಕಲಶವಿಟ್ಟಂತಿವೆ.

ಲೇಖಕರ ಕಥನ ಶೈಲಿ, ಸಹಜ ಶೈಲಿ. ಓದಿಸಿಕೊಂಡು ಹೋಗುತ್ತದೆ. ಸಂಭಾಷಣೆ, ನಾಟಕೀಯ ಸನ್ನಿವೇಶ, ಸಂಕ್ಷಿಪ್ತತೆಗಳಿಂದ ಕೂಡಿದ್ದರೂ, ನೈತಿಕ ಅಂಶಗಳನ್ನು ಹೊರಹೊಮ್ಮಿಸುವಲ್ಲಿ ಒಂದು ಬಗೆಯ ನಾಜೂಕು ಹಾಗೂ ಮೊನಚಾದ ಧ್ವನಿ ಇಲ್ಲಿ ಕಂಡುಬರುತ್ತದೆ. ಮುಖ್ಯವಾದ ಮಾತುಗಳನ್ನು ದಪ್ಪ ಅಕ್ಷರಗಳಲ್ಲಿ ನೀಡಿರುವುದು ನಿರೀಕ್ಷಿತ ಪರಿಣಾಮವನ್ನು ಬೀರುತ್ತದೆ. ಕಥೆಯನ್ನು ಓದಿ ಆನಂದಿಸಬಹುದು, ನೈತಿಕ ವಿಷಯಗಳನ್ನು ಅರಿತುಕೊಳ್ಳಬಹುದು, ಎಲ್ಲಕ್ಕಿಂತ ಮುಖ್ಯವಾಗಿ, ಹತ್ತು ಜನರ ಮುಂದೆ ಇವುಗಳನ್ನು ನೆನಪಿಸಿಕೊಂಡು ಕಥೆ ಹೇಳಬಹುದು. ಮಕ್ಕಳಿಗೆ ಕಥೆ ಹೇಳುವವರಿಗಂತೂ ಈ ಗ್ರಂಥ ತುಂಬ ಉಪಯುಕ್ತ. ಈ ಕಥೆಗಳನ್ನು ಒಂದು ಸಲ ಕೇಳಿದರೂ ಸಾಕು, ಯಾವುದೋ ಒಂದು ಸಂದರ್ಭದಲ್ಲಿ ಇವು ನಮ್ಮ ಜೀವನದಲ್ಲಿ ನೈತಿಕ ಮೌಲ್ಯವನ್ನು ಜಾಗೃತಗೊಳಿಸಿ, ಸರಿ ತಪ್ಪು ನಿರ್ಣಯ ಮಾಡಲು ಹಾಗೂ ಸರಿಯಾದ ದಾರಿಯಲ್ಲಿ ಮುನ್ನಡೆಯಲು ದಾರಿ ತೋರುತ್ತದೆ. ಈ ದೃಷ್ಟಿಯಲ್ಲಿ ಲೇಖಕರ ಶ್ರಮದ ಕೆಲಸ ಅತ್ಯಂತ ಉತ್ತಮವಾಗಿ ಫಲ ನೀಡಿದೆ ಎನ್ನಬೇಕು. ಮನೆಮನೆಗಳಲ್ಲಿ ಸಂಗ್ರಹಯೋಗ್ಯವಾದ ಈ 'ಕಥಾಮಾಲೆ', ಕನ್ನಡದ ಕಥಾಜಗತ್ತಿಗೆ ಒಂದು ಉತ್ತಮ ಸೇರ್ಪಡೆಯಾಗಿದೆ.